# ಅಧ್ಯಕ್ಷರ ನುಡಿ



**ಆತ್ಮೀಯ ಸಹಕಾರಿ ಬಂಧುಗಳೇ,**

ಅಂದಿನ ಪ್ರಗತಿಪರ ಚಿಂತನೆಯುಳ್ಳ ಉತ್ತಮ ಅನುಭವ ಹಿನ್ನೆಲೆ, ನಿಸ್ವಾರ್ಥ ಮನೋಭಾವದ ಹಿರಿಯರು ಒಂದುಗೂಡಿ ಸ್ಥಾಪಿಸಿದ ನಮ್ಮ ನಿಮ್ಮೆಲ್ಲರ ನೆಚ್ಚಿನ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಸಹಕಾರಿ ಕ್ಷೇತ್ರದಲ್ಲಿ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ 67 ವರ್ಷಗಳಿಂದ ಸುಧೀರ್ಘವಾಗಿ ಬ್ಯಾಂಕಿನ ನಿರ್ದೇಶಕ ಮಂಡಲಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಬ್ಯಾಂಕಿನ ಸಿಬ್ಬಂದಿಗಳಿಂದ ಕಾರ್ಯವ್ಯಾಪ್ತಿ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿ ವಿವಿಧ ಸೇವೆಗಳನ್ನು ಒದಗಿಸುತ್ತಿರುವುದನ್ನು ತಿಳಿಸಲು ಹರ್ಷವೆನಿಸುತ್ತದೆ.

ಕೇವಲ ಲಾಭಗಳಿಕೆಯನ್ನೇ ಉದ್ದೇಶವನ್ನಾಗಿ ಇಟ್ಟುಕೊಳ್ಳದೇ ಸಮಾಜದ ವಿವಿಧ ಸ್ತರಗಳಿಗೆ ತನ್ನ ಸೇವೆ ಸಲ್ಲಿಸುತ್ತಾ, ಅಭಿವೃದ್ಧಿ ಕಾರ್ಯಗಳಿಗೆ ಸೃಜನಶೀಲ ಚಟುವಟಿಕೆಗಳಿಂದ ಸಾಕಷ್ಟು ನೆರವು ನೀಡುತ್ತಾ, ಪ್ರಮುಖವಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕನೇ ಮುಖ್ಯ ಬಿಂದು. ಒಮ್ಮೆ ಬಂದ ಗ್ರಾಹಕ ಕೊನೆಯವರೆಗೂ ನಮ್ಮಲ್ಲಿ ಉಳಿಯಬೇಕು ಎಂಬ ಮನೋಭಾವದಿಂದ ಸೇವೆ ಸಲ್ಲಿಸುತ್ತಿರುವ ನಮ್ಮ ಬ್ಯಾಂಕು ದಿನಾಂಕ:31.03.2022 ರಲ್ಲಿದ್ದಂತೆ 1768 ಸದಸ್ಯರು, ರೂ.6063.31 ಲಕ್ಷಗಳ ಷೇರು ಬಂಡವಾಳ, ರೂ.88605.70 ಲಕ್ಷಗಳ ಠೇವಣಿ, ರೂ.98611.56 ಲಕ್ಷಗಳ ಸಾಲ ಮತ್ತು ಮುಂಗಡಗಳು, ರೂ.144562.56 ಲಕ್ಷಗಳ ದುಡಿಯುವ ಬಂಡವಾಳ ಹೊಂದಿದ್ದು, ಎಲ್ಲಾ ವ್ಯವಹಾರದಲ್ಲಿ ಗುರಿ ಸಾಧನೆಗೆ ಶ್ರಮಿಸಿ, ರೂ.774.04 ಲಕ್ಷಗಳ ಲಾಭವನ್ನು ಗಳಿಸಿದೆ ಎಂದು ತಮಗೆ ತಿಳಿಸಲು ಅತೀವ ಸಂತೋಷವಾಗುತ್ತದೆ.

ಕೃಷಿಗೆ ಹೊಂದಿಕೊಂಡಂತಹ ಉದ್ದೇಶಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕಿನಿಂದ ಸಾಲವನ್ನು ನೀಡಲಾಗುತ್ತಿದೆ. ಸ್ಥಿರಾಸ್ತಿ ಹೊಂದಿರುವ ವ್ಯಕ್ತಿಗಳಿಗೆ ಸ್ಥಿರಾಸ್ತಿ ಅಡಮಾನ ಸಾಲ, ಗೃಹ ನಿರ್ಮಾಣ, ವಾಣಿಜ್ಯ ಸಂಕೀರ್ಣ ನಿರ್ಮಾಣ ಸಾಲಗಳನ್ನು ಗ್ರಾಮ ಮಟ್ಟದವರೆಗೂ ನೀಡಲಾಗುತ್ತಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸ್ವ-ಸಹಾಯ/ಸ್ತ್ರೀ ಶಕ್ತಿ ಗುಂಪುಗಳಿಗೆ ಎನ್.ಆರ್.ಎಲ್.ಎಂ ಮತ್ತು ಎನ್.ಯು.ಎಲ್.ಎಂ. ಯೋಜನೆಯಡಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ. ಪ್ರಸ್ತುತ ವರ್ಷದಲ್ಲಿ ಸಾರ್ವಜನಿಕರಿಗೆ ಪ್ರಯೋಜನವಾಗುವಂತೆ ಚಿನ್ನಾಭರಣ ಸಾಲದ ಮೇಲೆ ನೀಡುತ್ತಿದ್ದ ಸಾಲವನ್ನು ರೂ.15 ಲಕ್ಷಗಳಿಂದ ರೂ.25.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

ಬ್ಯಾಂಕು ಮಾಗಡಿ ತಾಲ್ಲೂಕು ಅಗಲಕೋಟೆ ಕೇಂದ್ರಸ್ಥಾನದಲ್ಲಿ ಹೊಸ ಶಾಖೆಯನ್ನು ಪ್ರಾರಂಭಿಸಿದ್ದು, ಉಳಿದಂತೆ ಬ್ಯಾಂಕಿನ ಕಾರ್ಯವ್ಯಾಪ್ತಿಯ ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 9 ಶಾಖೆಗಳನ್ನು ತೆರೆಯಲು ನಿಬಂಧಕರವರ ಮುಖಾಂತರ ಪ್ರಸ್ತಾವೆಯನ್ನು ನಬಾರ್ಡ್‌ಗೆ ಸಲ್ಲಿಸಲಾಗಿರುತ್ತದೆ. ನಬಾರ್ಡ್‌ನವರು ಆರ್.ಬಿ.ಐ.ಗೆ ಶಿಫಾರಸ್ಸು ಮಾಡಿದ್ದು, ಶೀಘ್ರದಲ್ಲಿ ಅನುಮತಿ ಬರುವ ನಿರೀಕ್ಷೆಯಲ್ಲಿದ್ದೇವೆ.

ಬ್ಯಾಂಕಿನ ಎಲ್ಲಾ ಶಾಖೆಗಳು ಸಿ.ಬಿ.ಎಸ್.ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೋರ್ ಬ್ಯಾಂಕಿಂಗ್ ಸಿಸ್ಟಮ್‌ನಲ್ಲಿ ವಿವಿಧ ರೀತಿಯ ಹೊಸ ಯೋಜನೆಗಳಾದ ಇಂಟರ್‌ನೆಟ್ ಬ್ಯಾಂಕಿಂಗ್, ಐ.ಎಂ.ಪಿ.ಎಸ್., ಯು.ಪಿ.ಐ., ಗ್ರೀನ್ ಪಿನ್ (ಗ್ರಾಹಕರು ಎ.ಟಿ.ಎಂ.ನಲ್ಲಿ ತಮ್ಮ ಪಿನ್ ಬದಲಾಯಿಸಿಕೊಳ್ಳುವ ಅವಕಾಶ) ಮೈಕ್ರೊ ಎ.ಟಿ.ಎಂ., ಹಾಗೂ ಇ.ಸಿ.ಎಸ್., ಸೇವೆಗಳನ್ನು ಒದಗಿಸಲಾಗುತ್ತಿದೆ, ಇದರ ಜೊತೆಗೆ ಪ್ರಸಕ್ತ ವರ್ಷದಲ್ಲಿ ಬ್ಯಾಂಕಿನಿಂದ ನಬಾರ್ಡ್ ಸಹಯೋಗದೊಂದಿಗೆ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಪ್ರಾರಂಭಿಸಿದ್ದು, ಬ್ಯಾಂಕಿನ ಮೂರು ಜಿಲ್ಲೆಗಳಲ್ಲಿ ರೈತರ ಮನೆಯ ಬಾಗಿಲಿಗೆ ಬ್ಯಾಂಕಿಂಗ್ ಹಾಗೂ ಭಾರತ್ ಬಿಲ್ ಪೇಮೆಂಟ್ ಸಿಸ್ಟಮ್ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು, ಇದರ ಸೇವೆಯನ್ನು ಗ್ರಾಹಕರು/ರೈತರು ಉತ್ಸಾಹದಿಂದ ಪಡೆಯುತ್ತಿದ್ದಾರೆ.

ಬ್ಯಾಂಕಿನ ಪ್ರಧಾನ ಕಛೇರಿ ಕಟ್ಟಡ ನಿರ್ಮಾಣವಾಗುತ್ತಿದ್ದು, ಒಳವಿನ್ಯಾಸ ಕಾಮಗಾರಿ ಪ್ರಗತಿ ಹಂತದಲ್ಲಿರುತ್ತದೆ, ಕಟ್ಟಡದಲ್ಲಿ ಎಲ್ಲಾ ರೀತಿಯ ಆಧುನಿಕ ಮೂಲ ಸೌಕರ್ಯಗಳುಳ್ಳ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸುಸಜ್ಜಿತವಾಗಿ ಮಾಡಲು ಉದ್ದೇಶಿಸಲಾಗಿದೆ.

2021-22 ನೇ ಸಾಲಿಗೆ ನಬಾರ್ಡನ ವಿಶೇಷ ಪುನರ್ಧನ ಸೌಲಭ್ಯ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹು ಸೇವಾಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಶೇ.4ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ.

ಬ್ಯಾಂಕಿನ ಸಿಬ್ಬಂದಿಗಳಿಗೆ ಪ್ರಪ್ರಥಮವಾಗಿ ರೂ.3.00 ಲಕ್ಷಗಳವರೆಗೆ ಆರೋಗ್ಯ ವಿಮೆ ಯೋಜನೆಯನ್ನು ಇಫ್ಕೋ ಟೋಕಿಯೋ ಕಂಪನಿಯ ಸಹಯೋಗದೊಂದಿಗೆ ಜಾರಿಗೆ ತಂದಿದ್ದು, ದಿನಾಂಕ:26.08.2022 ರಂದು ಆರೋಗ್ಯ ವಿಮಾ ಕಾರ್ಡ್‌ಗಳನ್ನು ಬ್ಯಾಂಕಿನ ಸಿಬ್ಬಂದಿಗಳಿಗೆ ಮಾನ್ಯ ಸಹಕಾರ ಸಚಿವರಿಂದ ಸಾಂಕೇತಿಕವಾಗಿ ವಿತರಿಸಲಾಗಿರುತ್ತದೆ.

ಬ್ಯಾಂಕಿನ ಸರ್ವಾಂಗೀಣ ಉತ್ತರೋತ್ತರ ಅಭಿವೃದ್ಧಿಗೆ ಕಾರಣಕರ್ತರಾದ ಎಲ್ಲಾ ಸಹಕಾರಿ ಬಂಧುಗಳಿಗೆ, ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯ ಮಂತ್ರಿಗಳಿಗೆ, ಮಾನ್ಯ ಸಹಕಾರ ಸಚಿವರಿಗೆ, ಭಾರತೀಯ ರಿಜರ್ವ್ ಬ್ಯಾಂಕು ಮತ್ತು ನಬಾರ್ಡ್‌ನ ಅಧಿಕಾರಿಗಳಿಗೆ, ಕ.ರಾ.ಸ.ಅಪೆಕ್ಸ್ ಬ್ಯಾಂಕು ಹಾಗೂ ಸಹಕಾರ ಸಂಘಗಳ ನಿಬಂಧಕರಿಗೆ, ಸಹಕಾರ ಇಲಾಖಾಧಿಕಾರಿಗಳಿಗೆ, ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರುಗಳಿಗೆ ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸುತ್ತಾ, ಬ್ಯಾಂಕಿನ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ.

**// ಜೈ ಸಹಕಾರ //**